ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಸುಮಾರು ೧೫ ಲಕ್ಷ ರೂಪಾಯಿಗಳು.

ಆ) ಹೌದು

ಇ) ಈ ಸಂಸ್ಥೆಯನ್ನು ಪ್ರಾರಂಭಿಸಿದ ಶ್ರೀ ವಿ. ರಾಜಕುಮಾರ್ ಮತ್ತು ಶ್ರೀ ರಾಜಣ್ಣ ಎಂಬುವರ ಮೇಲೆ ಪ್ರೈಸ್ ಚಿಟ್ಸ್ ಮತ್ತು ಮನಿ ಸರ್ಕ್ಯುಲೇಷನ್ (ಬ್ಯಾನಿಂಗ್) ಕಾಯಿದೆಯ ಕಲಂ ೩ ರಂತೆ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ.

ಲೋಕಸೇವಾ ಆಯೋಗದ ಮೂಲಕ ನೇಮಕಾತಿ

೧೫೦೫. ಶ್ರೀ ಆರ್. ಪೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ ರಿಂದ ಈವರೆಗೆ ಲೋಕಸೇವಾ ಆಯೋಗವು ಸಹಾಯಕರು, ಕಿರಿಯ ಸಹಾಯಕರು ಮುಂತಾದ ಪತ್ರಾಂಕಿತವಲ್ಲದ ಹುದ್ದೆಗಳ ರಿಕ್ತ ಸ್ಥಾನಗಳನ್ನು ಎಷ್ಟು ಬಾರಿ ಪ್ರಕಟಿಸಿ ಅರ್ಜಿಗಳನ್ನು ಆಹ್ವಾನಿಸಿದೆ ?

ಆ) ಈ ಅವಧಿಯಲ್ಲಿ ನೇಮಕಾತಿ ಹೊಂದಿದ್ದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಇ) ರಿಕ್ತ ಸ್ಥಾನಗಳನ್ನು ಭರ್ತಿ ಮಾಡುವಾಗ ಲೋಕಸೇವಾ ಆಯೋಗವು ಸ್ಪೈಪೆಂಡಿಯರಿ ಪದವೀಧರರಿಗೆ ಆದ್ಯತೆ ನೀಡುತ್ತಿಲ್ಲವೆಂಬುದು ನಿಜವೆ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಮತ್ತು ಆ) ೧೯೮೬-೮೭ ರಿಂದ ಈವರೆಗೆ ಸಹಾಯಕರು ಪ್ರಥಮ ದರ್ಜೆ ಸಹಾಯಕರು ಮತ್ತು ಕಿರಿಯ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರುಗಳ ರಿಕ್ತಸ್ಥಾನಗಳನ್ನು ಲೋಕ ಸೇವಾ ಆಯೋಗವು ಜಾಹಿರುಗೊಳಿಸಿಲ್ಲ, ಆದರೆ ಹಿಂದೆ ಪ್ರಕಟಿಸಿದ ಈ ಹುದ್ದೆಗಳಿಗೆ ೧೯೮೬-೮೭ ರಿಂದ ಈವರೆಗೆ ೩೯೪೪ ಅಭ್ಯರ್ಥಿಗಳನ್ನು ಆಯೋಗವು ಆಯ್ಕೆ ಮಾಡಿದೆ.

ಇ) ಸ್ಪೈಪೆಂಡಿಯರಿ ಪದವೀಧರರು ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಗ್ರೂಪ್ 'ಸಿ' ಹುದ್ದೆಗಳಲ್ಲಿ ವಿಶೇಷವಾಗಿ ಮೀಸಲಿರಿಸಿರುವ ಶೇಕಡ ೫೦ ಹುದ್ದೆಗಳಿಗೆ ಸ್ಪೈಪೆಂಡಿಯರಿ ಪದವೀಧರರನ್ನು ನೇಮಕ ಮಾಡಲು ಪರಿಗಣಿಸಲಾಗಿದೆ, ನಂತರ ಸ್ಪೈಪೆಂಡಿಯರಿ ಪದವೀಧರರಿಗೇ ಗ್ರೂಪ್ 'ಸಿ' ಹುದ್ದೆಗಳಲ್ಲಿ ಶೇಕಡ ೪೦ ಹುದ್ದೆಗಳನ್ನು ಮೀಸಲಿರಿಸುವಂತೆ ಆದೇಶವನ್ನು ಜಾರಿಯಾಗಿಸಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ೨೮೫ನೇ ನಿಯಮದಡಿಯಲ್ಲಿ ಸರ್ಕಾರಿ ನೌಕರರನ್ನು ನಿವೃತ್ತಿ ಮಾಡಿರುವುದು

೧೫೭೫. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ನಾಗರೀಕ ಸೇವಾ ನಿಯಮಗಳ ೨೮೫ನೇ ನಿಯಮದಡಿಯಲ್ಲಿ ಸರ್ಕಾರದವರು ಇತ್ತೀಚೆಗೆ ನಿವೃತ್ತಿ ಮಾಡಲಾಗಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ?
(ಇಲಾಖಾವಾರು ಮಾಹಿತಿಯನ್ನು ದಯವಿಟ್ಟು ಒದಗಿಸುವುದು)

ಆ) ಈ ರೀತಿ ಕಡ್ಡಾಯವಾಗಿ ನಿವೃತ್ತಿ ಮಾಡಲಾಗಿರುವ ನೌಕರರ ಪೈಕಿ ಪರಿಶಿಷ್ಟ ಜಾತಿಗೆ ಸೇರಿದ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು ಮಾಹಿತಿಯನ್ನು ದಯವಿಟ್ಟು ಒದಗಿಸುವುದು)